ಇಲ್ಲಿಂದಲೇ ಕೇಳಿಸ್ಕತ್ತಿನಿ' ಅಂದೆ. 'ಸರಿಯಮ್ಮ' ಎಂದವಳೆ, 'ಫಸ್ಟು ಕನ್ನಡ ಓದ್ತೀನಿ. ಇವತ್ತು ಮಾಡಿರೋ ಪಾಠ ಓದ್ತೀನಿ' ಅಂದಳು. 'ಸರಿ ಓದು ಓದು' ಅಂದೆ.

'ಪಾಠ ಮೂರು, ಶುಕನಾಸನ ಉಪದೇಶ, ದುಡ್ಡು ಅಥವಾ ಹಣ ಅನರ್ಥಗಳನ್ನು ಸೃಷ್ಟಿಸುತ್ತದೆ ಎಂಬ ಮಾತನ್ನು ಹಲವು ಮಹಾತ್ಮರು ಹೇಳಿದ್ದಾರೆ. ಅದು ಯಾರ ಬಳಿಯಾದರೂ ಸಂಚಯವಾಗತೊಡಗಿದರೆ ಹುಸಿ ಹಮ್ಮು ಆವರಿಸಿಕೊಳ್ಳುತ್ತದೆ. ನಾನು ಯಾರಿಗೂ ತಲೆ ಬಾಗಬೇಕಾಗಿಲ್ಲ ಎಂಬ ಭಾವನೆ ಮೂಡುತ್ತದೆ. ಅಲ್ಪಮಟ್ಟದ ಸಂಪತ್ತು ಬಂದವರ ಕಥೆಯೇ ಹೀಗಾದರೆ, ರಾಜ್ಯದ- ದೇಶದ ಸಂಪತ್ತನ್ನು ತಿನ್ನುವವರ ಕಥೆ ಹೇಗಿರಬಹುದು?'.

'ದುಡ್ಡನ್ನು ಲಕ್ಷ್ಮಿ ಎನ್ನುತ್ತಾರೆ. ಚಂಚಲೆ ಎಂಬುವುದು ಇದರ ಅರ್ಥ. ಇದು ಆಸೆಯ ವಿಷಲತೆಗೆ ಎರೆಯುವ ನೀರು. ಇಂದ್ರಿಯಗಳೆಂಬ ಜಿಂಕೆಗಳನ್ನು ಮರುಳುಗೊಳಿಸುವ ಬೇಡನ ಸಂಗೀತ. ಒಳ್ಳೆಯ ನಡತೆ ಎಂಬ ಚಿತ್ರಕ್ಕೆ ಬಳಿದ ಮಸಿ. ಅವಿವೇಕದ ಸವಿ ನಿದ್ದೆಗೆ ಹಾಸಿದ ಮೆಲುಹಾಸೆ. ಅಹಂಕಾರದ ಪಿಶಾಚಿಗಳಿಗೆ ನೆಲೆಮನೆಯಾದ ಹಳೆಯಟ್ಟ. ಸಜ್ಜನಿಕೆಗೆ ಬೀಸಿದ ಬೆತ್ತ. ಧರ್ಮವೆಂಬ ಚಂದ್ರಮಂಡಲವನ್ನು ಕಬಳಿಸುವ ರಾಹುವಿನ ಕರಿನಾಲಗೆ. ದುಡ್ಡಿನಿಂದ ದೊಡ್ಡವರು ಎನಿಸಿಕೊಂಡವರಲ್ಲಿ ಇರುವಷ್ಟು ದೌರ್ಬಲ್ಯ ಸಣ್ಣತನ ಇನ್ನೊಂದೆಡೆ ಇರಲಾರದು. ದುಡ್ಡು ದುರಭಿಮಾನದ ತವರು. ಇದಕ್ಕೆ ಮರುಳಾಗದವರೇ ಇಲ್ಲ. ಅಮೃತ ಸತ್ತವರನ್ನು ಬದುಕಿಸಿದರೆ ದುಡ್ಡು ಮನುಷ್ಯತ್ವವನ್ನೇ ಕೊಲ್ಲುತ್ತದೆ. ಅದಕ್ಕಾಗಿ ಜನ ಹೊಡೆದಾಡಿ ಸಾಯುತ್ತಾರೆ. ಆದರೆ ಅದು ಮಾತ್ರ ಯಾರ ಕಣ್ಣಿಗೂ ಕಾಣದೇ ಮೋಜು ನೋಡುತ್ತಿರುತ್ತದೆ...'

ಮಗಳ ಓದುಗಾರಿಕೆ ಕೇಳಿ ನನ್ನ ಮೈ ಜುಮ್ ಎನ್ನತೊಡಗಿತು. ನೇರ ಚಾವಡಿಗೆ ಹೋಗಿ ಅವಳ ಪಕ್ಕದಲ್ಲಿ ಕುಳಿತು, 'ಪುಸ್ತಕ ಕೊಡಿಲ್ಲಿ. ಈ ಪಾಠ ಯಾರು ಬರೆದಿದ್ದಾರೆ ನೋಡ್ತೀನಿ' ಅಂದೆ. 'ಇಲ್ಲೇ ಇದಿಯಲ್ಲಮ್ಮ ವಿದ್ಯಾವಾಚಸ್ಪತಿ ಡಾ.ಬನ್ನಂಜೆ ಗೋವಿಂದಾಚಾರ್ಯರು'. 'ಸರಿ ನೀನು ಈಗ ಬೇರೆ ಯಾವುದಾದ್ರೂ ಓದ್ಕೋ. ಇದನ್ನ ಮುಂದಕ್ಕೆ ನಾನೇ ಓದ್ತೀನಿ' ಅಂದೆ. ಸರಿ ಅಮ್ಮ ಎಂದವಳೇ ಹೋಮ್ ವರ್ಕ್ ಮಾಡತೊಡಗಿದಳು. ಮೌನವಾಗಿ ಪೂರ್ತಿ ಪಾಠ ಓದಿ ಮುಗಿಸಿದೆ. ಅಬ್ಬಾ ಹೇಗೆ ಬರೆದಿದ್ದಾರೆ ಎಂದರೆ ಪ್ರತಿಯೊಬ್ಬರೂ ಓದಲೇಬೇಕಾದ ಪಾಠ ಇದು. ಓದುತ್ತಾ ಓದುತ್ತಾ ನನಗೆ ಪುರಂದರ ದಾಸರ 'ದುಗ್ಗಾಣಿ ಬಲು ಕೆಟ್ಟದಣ್ಣ' ಪದ್ಯ ನೆನಪಾಯಿತು. ಮೌನ ತಾಳಿದೆ. ಒಂದು ಹತ್ತು ನಿಮಿಷ ಕಳೆದಿರಬಹುದು. ಅಷ್ಟರಲ್ಲಿ ಹತ್ತಿರದ ಮನೆಯ ಇಬ್ಬರು ಹೆಂಗಸರು ಜೋರಾಗಿ ಬಾಯಾಡುತ್ತಾ ಜಗಳವಾಡತೊಡಗಿದರು.

'ನಿನಗೇನಾದ್ರೂ ಗೌರ್‌ಮೆಂಟ್ ಕೆಲ್ಸ ಇದ್ದಿದ್ರೆ ಎನ್ ಮಾಡ್ತಿದ್ದೆ. ಏನೂ ಇಲ್ಲದೆ ಕೊಬ್ಬು ಧಿಮಾಕು..' ಅಂತ ಒಬ್ಬಳು, ಇನ್ನೊಬ್ಬಳಿಗೆ ಅಂದು ಬಿಟ್ಟಿದ್ದಾಳೆ. ಇವಳು ಇಡೀ ಊರಿಗೆಲ್ಲಾ ಕೇಳುವಂತೆ. 'ನೀನು ಗಂಡನ ಪೆನ್ಸನ್ ದುಡ್ಡಲ್ಲಿ ಮೆರೀತಾ ಇದಿಯಾ. ಮಗಂಗೋ ಮಗಳಿಗೋ ದುಡ್ಡಿಗೆ ಕಾಸಿಗೆ ಕೈ ಒಡ್ಡದಾಗಿದ್ರೆ ಗೊತ್ತಾಗಿರೊದು ನಿನಗೆ. ಬಿಟ್ಟಿ ದುಡ್ಡು ಕಷ್ಟ ಪಡದ ದುಡ್ಡು. ಅಕೌಂಟಿಗೆ ಬಂದು ಬೀಳುತ್ತೆ. ಸರ್ಕಾರ ಹಾಳ್ಬೀಳ ದುಡ್ಡು ಹೆಚ್ಚಾದ ಹೆಂಗಸ್ರಿಗೆಲ್ಲಾ ತಿಂಗಳಿಗೆ ಎರಡು ಸಾವಿರ. ಬಸ್ಸಿಗೂ ದುಡ್ಡುಕಾಸು ಏನೂ ಇಲ್ಲ, ಹಡಬಿಟ್ಟಿ ದುಡ್ಡು ತಿನ್ನಕೂ ಯೋಗ ಬೇಕು. ಪಾಪ ನಿನ್ನ ಗಂಡ ಆ ಮನುಷ್ಯ ಸಾಯ್ಲಾಗಿ ನೀನು ದುಡ್ಡಿನ ಮುಖ ನೋಡಿದ್ದು. ಆಕಳಿಸಿ ತೂಕಡಿಸಿ ತಿಂದುಉಂಡು ಕಂಡರ ಮನೆ ಸುದ್ದಿ ಮಾತಾಡಿ ಕಾಲ ಕಳೆಯಲಿಕ್ಕೆ ದುಡ್ಡು ಬಂದು ಬೀಳುತ್ತೆ...ಹಂಗಾಗಿ ಕುಣೀತಾ ಇದಿಯಾ ಕುಣಿ. ನನ್ನ ಸುದ್ದಿಗೆ ಬಂದ್ರೆ ಹುಷಾರ್. ಹಡಬಿಟ್ಟಿ ದುಡ್ಡಲ್ಲಿ ಬದುಕ್ತಾ ಇಲ್ಲ ನಾನು ನನ್ನ ಮಕ್ಕಳು. ನಾಲಗೆ ಬಿಗಿ ಇರ್ಲಿ. ನಾನು ನನ್ನ ಮಕ್ಕಳು ಕಷ್ಟಪಟ್ಟು ಅನ್ನ ತಿನ್ತಾ ಇದೀವಿ. ನಿನ್ನ ಅಹಂಕಾರಕ್ಕೆ ನನ್ನ ಎಕ್ಕಡ ಸಿಕಹಾಕ. ಸರ್ಕಾರದ ದುಡ್ಡಿಲ್ಲದೆ ಬದಿಕಿ ತೋರ್ಸೆ. ನೋಡನ ಮೂರು ಕಾಸಿನ ಬುದ್ಧಿ ಎಲ್ಲಿ ಹೋಗುತ್ತೆ? ನಯಾ ಪೈಸದ ತಿಳಿವಳಿಕೆ ಇಲ್ಲ ನಿನ್ನ ತಲೇಲಿ' ಎನ್ನುತ್ತಾ ಕ್ಯಾಕರಿಸಿ ಉಗಿದಳು.

ಅಷ್ಟೊತ್ತಿಗೆ ಮನೆಗೆ ಬಂದ ಇವಳ ತಂದೆ, 'ಯಾರ ಮನೇಲಾದ್ರೂ ಜಗಳ ಶುರು ಆದ್ರೆ ನಿಮ್ಮ